**ಅಸಲು ದಾವಾ ನಂ:263/2020**
**ಪಿ.ಡಬ್ಲ್ಯೂ: 01**

**ದಿನಾಂಕ:25-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಜಿ ವಿ ಆರ್., 2, 7 ಮತ್ತು 8 ನೇ ಪ್ರತಿವಾದಿ ಪರ ವಕೀಲರಿಂದ**

ನಾನು ನರ್ಸಿಂಗ್ ಮಾಡಿರುತ್ತೇನೆ. ನನ್ನ ತಾಯಿ ಅವಿದ್ಯಾವಂತಳು. ನನ್ನ ತಾಯಿಗೆ ಇಬ್ಬರು ಮಕ್ಕಳು. ಅವರುಗಳೆಂದರೆ ಅನುಸುಯಮ್ಮ ಮತ್ತು ಭಾಗ್ಯಮ್ಮ. ನಾನು ಸ್ಟಾಫ್ ನರ್ಸ್ ಆಗಿ ಸುಮಾರು 16 ವರ್ಷಗಳಿಂದ ತುಮಕೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. ದಾವಾಗೆ ಸಂಬಂಧಿಸಿದಂತೆ ಪಹಣಿ, ಈ.ಸಿ., ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತೇನೆ.

ಅಯ್ಯಪ್ಪ ಯಾನೆ ಅಯ್ಯಣ್ಣ ಬಿನ್ ಅಜ್ಜಪ್ಪ ಹಾಗೂ ಅವರ ಹೆಂಡತಿ ಕರಿಯಮ್ಮರವರು ಮೃತರಾಗಿ 46 ವರ್ಷ ಆಗಿರುತ್ತದೆ. ದಿನಾಂಕ, ತಿಂಗಳು ಮತ್ತು ವರ್ಷವನ್ನು ನಿಖರವಾಗಿ ಹೇಳಲು ಆಗುವುದಿಲ್ಲ. ನನ್ನ ತಾಯಿ ಆರ್ಯೋಗ್ಯ ಎಂದರೆ ಸರಿಯಲ್ಲ. ನನ್ನ ತಾಯಿಗೆ ಈಗ 70 ವರ್ಷ ವಯಸ್ಸಾಗಿರುತ್ತದೆ. ಸದರಿಯವರನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡಲು ನನ್ನ ಅಭ್ಯಂತ್ರ ಇರುವುದಿಲ್ಲ. 1 ನೇ ಪ್ರತಿವಾದಿ ಮೃತರಾಗಿ ಒಂದು ವರೆ ವರ್ಷ ಆಗಿರುತ್ತದೆ. ದಿನಾಂಕ, ತಿಂಗಳು ಮತ್ತು ವರ್ಷವನ್ನು ನಿಖರವಾಗಿ ಹೇಳಲು ಆಗುವುದಿಲ್ಲ.

1 ನೇ ವಾದಿಯು ಅಜ್ಜಣ್ಣನ ಮೊದಲನೆ ಹೆಂಡತಿ ಎಂದು ತೋರಿಸಲು ಆಧಾರ ಕಾರ್ಡನ್ನು ಹಾಜರುಪಡಿಸಿರುತ್ತೇನೆ. ನಾನು ಆಧಾರ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ವಾದಿಯ ಆಧಾರ ಕಾರ್ಡ ಪಾವಗಡ ವಿಳಾಸದಲ್ಲಿ ಇರುತ್ತದೆ. ನನ್ನ ಅಕ್ಕ ಅನುಸುಯಮ್ಮ ದಿ:09-07-2009 ರಂದು ಮೃತರಾಗಿರುತ್ತಾರೆ. ನಿಪಿ:25 ರಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದ್ದು, ನಾನೇ ಹೇಳಿ ಬರೆಸಿರುತ್ತೇನೆ. ಸದರಿ ದಾಖಲೆಯನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ:25 ರ ದಾಖಲೆಯನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದಿಲ್ಲ ಎಂದರೆ ಸಾಕ್ಷಿಯು ಎಲ್ಲರ ಆಧಾರ ಕಾರ್ಡ ಸಿಗಬೇಕಲ್ಲ? ಎಂದು ಕೇಳುತ್ತಾರೆ. ಸಕ್ಷಮ ಪ್ರಾಧಿಕಾರದಿಂದ ವಂಶವೃಕ್ಷವನ್ನು ಪಡೆದರೆ ಅದು ಅಧಿಕೃತವಾಗುತ್ತದೆ ಎಂದರೆ ಸಾಕ್ಷಿಯು ಪ್ರಮಾಣಪತ್ರದ ಮೂಲಕ ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ:25 ರಲ್ಲಿ ಮೂಲ ವಾಸ ಪರುಶುರಾಂಪುರ ಗ್ರಾಮ ಚಳ್ಳಕೆರೆ ತಾಲ್ಲೂಕು ಎಂದು ಸುಳ್ಳಾಗಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ:25 ರಲ್ಲಿ ಹಾಲಿ ವಾಸ ಶೀರಾ ಗೇಟ್ ಎಂದು ನಮೂದಿಸಿರುತ್ತದೆ ಎಂದರೆ ಸರಿ.

ನಾವು ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೇ ನಂ.114/2 ಎ ಆಗಿರುತ್ತದೆ. ಸದರಿ ಸ್ವತ್ತಿನ ಚೆಕ್ ಬಂದಿ ಪೂರ್ವಕ್ಕೆ ಗೋವಿಂದಪ್ಪರವರ ಜಮೀನು, ಪಶ್ಚಿಮಕ್ಕೆ ಚನ್ನಮಲ್ಲಪ್ಪರವರ ಜಮೀನು, ಉತ್ತರಕ್ಕೆ ನಾಗರಾಜರವರ ಜಮೀನು, ದಕ್ಷಿಣಕ್ಕೆ ಪರಮೇಶ್ವರಪ್ಪರವರ ಜಮೀನು ಇರುತ್ತದೆ.

ನಮ್ಮ ಮತ್ತು ಪ್ರತಿವಾದಿಯರ ಮೂಲ ಪುರುಷ ಅಯ್ಯಣ್ಣ ಮೃತರಾದ ನಂತರ ಅವರ 1 ನೇ ಮಗ ಈರಣ್ಣನ ಹೆಸರಿಗೆ ಪೌತಿ ಖಾತೆ ಆಗಿರುವುದಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈರಣ್ಣ ಬಿನ್ ಅಯ್ಯಣ್ಣರವರು ಪೌತಿಯಾದ ನಂತರ 1 ನೇ ಪ್ರತಿವಾದಿಯ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ದಾವಾ ಸ್ವತ್ತು ನಮ್ಮ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಸ್ವತ್ತು ಎಂಬುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗಾಗಲೀ ಅಥವಾ ನನ್ನ ತಾಯಿಗಾಗಲೀ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ವಿನಾಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಪಾಲುವಿಭಾಗಕ್ಕೆ ಸಂಬಂಧಿಸಿದಂತೆ ನಮ್ಮ ಮತ್ತು ಪ್ರತಿವಾದಿಯರ ನಡುವೆ ವೈಮನಸ್ಸು ಉಂಟಾಗಿರುವ ಬಗ್ಗೆ ದೂರನ್ನು ಸಲ್ಲಿಸಿಲ್ಲ. ಮನೆಯಲ್ಲಿಯೇ ಪಂಚಾಯಿತಿ ಮಾಡಿಸಿರುತ್ತೇವೆ. ಪ್ರತಿವಾದಿಯರಿಗೆ ಹಿರಿಯರ ಸಮಕ್ಷಮ ಬುದ್ಧಿವಾದ ಹೇಳಿಸಿಲ್ಲ ಎಂದರೆ ಸರಿಯಲ್ಲ. ಹಿರಿಯರು ಎಂದರೆ ರಾಧಮ್ಮ ವಾಸ ಕೊಂಡಲಹಳ್ಳಿ ಗ್ರಾಮ, ಓಬಣ್ಣ ಮತ್ತು ಅಕ್ಕಪಕ್ಕದ ಮನೆಯವರು ಹಾಜರಿದ್ದರು. ಸದರಿ ರಾಧಾ ನಮ್ಮ ಸಂಬಂಧಿಕರು ಎಂದರೆ ಸರಿ. ರಾಧಾರವರನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಸಾಕ್ಷ್ಯವನ್ನು ಹೇಳಿಸಲು ಕರೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ 1/3 ಭಾಗಂಶದ ಹಕ್ಕಿನಲ್ಲಿ 2/3 ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.